ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಸಿಟ್ಟಾಗಿ ದೇಶ ಬಿಟ್ಟು ಹೊರಟ ಹಕ್ಕಿ

ಜೀವನಪರ್ಯಂತ ಒಂದೇ ಸಂಗಾತಿಯ ಜೊತೆ ಪ್ರಾಮಾಣಿಕ ಬಾಳುವೆ ಮಾಡುವ ಈ ಬೆಳ್ಳಕ್ಕಿಯ ಕಥೆ ತುಂಬಾ ರೋಚಕತೆ ಹುಟ್ಟಿಸಿತು. ಯುರೋಪಿನ ಜನ ಈ ಹಕ್ಕಿ ತಮ್ಮ ಸುತ್ತಮುತ್ತ ವಾಸಿಸುವುದನ್ನು ಶುಭ ಶಕುನವೆಂದು ಈಗಲೂ ಭಾವಿಸುತ್ತಾರೆ. ಆದರಲ್ಲೂ ಇಂಗ್ಲೆಂಡಿನ ಜನ ತಮ್ಮ ನೆಲದಲ್ಲಿ ಈ ಕೆಂಪು ಮೂತಿಯ ಈ ಚೆಲುವ ಜೀವವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ

'ಈ ಬಡ್ಡೀ ಮಗ ನ್ಯಾಚುರಲಿಸ್ಟ್ ನಮ್ಗೆ ಮೋಸ ಮಾಡ್ತಿದ್ದಾನೆ ಸರ್. ಈಗ ಫಾರೆಸ್ಟ್ ಎಂಟ್ರಿಗೆ ದುಡ್ಡು ಕಟ್ಟಿದ್ದೇನೆ ಅಂತ ಸುಳ್ಳು ಬೊಗಳಿ ಕಳ್ಳಲೆಕ್ಕ ತೋರ್ಸಿದ್ದಾನೆ. ಇದ್ಯಾವುದೂ ಮೊದಲು ಮಾತಾಡಿರ್ಲಿಲ್ಲ. ನಸಗುನ್ನಿ ನನ್ಮಗನ್ನ ಕೇಳಿ ಇಲ್ಲಿ ಕಾಡೆಲ್ಲಿದೆ ಅಂತ. ಎಲ್ಲಾ ಕಡೆ ಬೋಳು ಬೆಟ್ಟ, ನೀರೇ ತುಂಬ್ಕೊಂಡಿದೆ. ಈ ಬಲ್ಡು ಭೂಮಿನಾ ಅರಣ್ಯ ಅಂದಬುಟ್ಟು ಯಾವ ಗುಲ್ಡು ಇಲಾಖೆ ಅಡ್ಮೀಷನ್ ಫೀ ತಗೋಳುತ್ತೆ ಹೇಳಿ? ನೀವು ಮಾತ್ರ ಯಾವ್ದೇ ಕಾರಣಕ್ಕೂ ಜಾಸ್ತಿ ಕಾಸು ಕೊಡೋಕೆ ಹೋಗಬ್ಯಾಡಿ' ಎಂದು ಗೆಳೆಯ ಶಶಿ ಸಿಂಗ್ ರೊಚ್ಚಿಗೆದ್ದು ಶಪಿಸುತ್ತಿದ್ದರು. ನಾನು ಸ್ವಲ್ಪ ಬೇಗ ಮುಲಾಜಿಗೆ ಒಳಗಾಗುತ್ತೇನೆ ಎಂಬುದು ಗೊತ್ತಿದ್ದ ಉಳಿದ ಪಟಗಾರ ಗೆಳೆಯರು ಹೌದೌದು ಶಶಿ ಹೇಳೋದು ಸರಿ ಎಂದು ತಾಳ ಬೆಂಬಲ ಸೂಚಿಸಿದರು.

ಇವತ್ತಿಗೆ ಮೂರು ದಿನದ ತಿರುಗಾಟ ಮುಗಿದಾಗಿತ್ತು. ಫೈನಲ್ ಅಮೌಂಟ್ ಸೆಟಲ್ ಮಾಡುವ ಸಮಯದಲ್ಲಿ ಈ ಹೊಸ ಸಮಸ್ಯೆ ಎದುರಾಗಿದ್ದು. ನಾನು ಹಾಳಾಗಿ ಹೋಗಲಿ ಕೊಟ್ಟು ಬಿಡೋಣ ಎನ್ನುವ ಮೂಡಿನಲ್ಲಿದ್ದೆ. ಉಳಿದ ನನ್ನೆಲ್ಲಾ ಗೆಳೆಯರೂ ಕೋಪದ ಮೂಡಿನಲ್ಲಿದ್ದ ಕಾರಣ ನನಗೂ ತಿಕ್ಕಲು ಹತ್ತಿತ್ತು. ಬಿಪಿ ಏರಿಸಿಕೊಂಡು ಒಂದು ಸಣ್ಣ ಜಗಳ ಮಾಡಿದೆ. ಎರ್ರಾಬಿರ್ರಿ ಜೋರು ಮಾಡಿದೆ. ಅದವನಿಗೆ ಕಿಂಚಿತ್ತೂ ತಾಗಲಿಲ್ಲ. ಅವನೋ ಜಗಭಂಡ. ಜಪ್ಪಯ್ಯ ಎನ್ನಲಿಲ್ಲ. ಸನಿಹದಲ್ಲೇ ತನ್ನ ರಕ್ಷಣೆಗಾಗಿ ರೌಡಿಗಳನ್ನು ತಾನು ಸಾಕಿಕೊಂಡಿರುವುದಾಗಿಯೂ; ಒಂದು ಸೀಟಿ ಹೊಡೆದರೆ ಕ್ಷಣದಲ್ಲಿ ಇಲ್ಲೇ ಪ್ರತ್ಯಕ್ಷರಾಗಿಬಿಡುವರೆಂದೂ ತಣ್ಣಗೆ ಹೆದರಿಸಿದ. ಅವನ ಮಾತಿನ ನಂತರ ನೋಡಲಾಗಿ ಸುತ್ತಮುತ್ತ ಅಲ್ಲಿಯ ತನಕ ಸ್ನೇಹಪರರಂತೆ ಕಾಣುತ್ತಿದ್ದ ಸ್ಥಳೀಯ ಜನರೆಲ್ಲಾ ಯಮದೂತರಂತೆ ರಾಚತೊಡಗಿದರು. 'ಎಮ್ಮೆ ಕಾಯುವ ಜನ. ಬಡಿಗೆಯಲ್ಲಿ ಬುರುಡೆ ಬಿಚ್ಚಲೂ ಹೇಸುವುದಿಲ್ಲ ಸರ್' ಎಂದು ಪಿಸುಗುಟ್ಟಿದ. 'ನಮ್ಮಂಥ ಅದೆಷ್ಟೋ ಜನರಿಗೆ ಮಂಗ ಮಾಡಿದವನಿಗೆ ನಾವು ಯಾವ ಲೆಕ್ಕ! ಹಾಳಾಗಿ ಹೋಗು' ಎಂದು ದುಡ್ಡು ಬಿಸಾಕಿದ ಮೇಲೆ ವಿಚಿತ್ರವಾಗಿ ಹಲ್ಲು ಕಿಸಿದು. 'ಮತ್ತೊಮ್ಮೆ ಬನ್ನಿ. ನಿಮ್ಮ ಸೇವೆಯ ಅವಕಾಶ ಕೊಡಿ' ಎಂದು ಗುಟ್ಕಾ ಕಲೆಗಳ ಕಪ್ಪು ಹಲ್ಲುಗಳ ಪ್ರದರ್ಶಿಸಿದ.

ಹೀಗೆ ನಮಗೆ ಕಿರಿಕಿರಿ ಕೊಟ್ಟ ಮಹಾಶಯ ರಾಹುಲ್ ಕಾಳೆ ಎಂಬ ಮನುಷ್ಯ. ಇಡೀ ಟೂರಿನಲ್ಲಿ ತಲೆಚಿಟ್ಟು ಹಿಡಿಸುವಷ್ಟು ಆತ ಮಾತಾಡಿದ್ದ. ತನ್ನ ತಾರೀಫು ಬಿಡುವಿಲ್ಲದೆ ಮಾಡಿಕೊಳ್ಳುತ್ತಿದ್ದ. ಹೇಳಿದ್ದನ್ನೇ ಮತ್ತೆ ಮತ್ತೆ ಪುನಾರಾವರ್ತಿಸುತ್ತಿದ್ದ. ನಡುನಡುವೆ ಫೋಟೋಗ್ರಫಿ ಸಮಯದಲ್ಲಿ ಯಾರೂ ಮಾತಾಡಬಾರದು ಎಂದು ಗೂಬೆಗಳ ತರಹ ತೆಪ್ಪಗೆ ಕೂತಿದ್ದ ನಮಗೆ ಆದೇಶ ನೀಡುತ್ತಿದ್ದ. ತನ್ನೆಲ್ಲಾ ಮಾತಿಗೆ ಹ್ಞೂಂ ಗುಟ್ಟಲು ಅವನ ತಂಗಿ ಗಂಡನೊಬ್ಬನ ಎರವಲು ತಂದಿದ್ದ.